ಮುಸಲ್ಮಾನನನ್ನು ನಿಂದಿಸುವುದು ಅವಿಧೇಯತೆಯಾಗಿದೆ ಮತ್ತು ಅವನೊಡನೆ ಹೋರಾಡುವುದು ಸತ್ಯನಿಷೇಧವಾಗಿದೆ

ಅಬ್ದುಲ್ಲಾ ಬಿನ್ ಮಸ್ಊದ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು
(ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಮುಸಲ್ಮಾನನನ್ನು ನಿಂದಿಸುವುದು ಅವಿಧೇಯತೆಯಾಗಿದೆ ಮತ್ತು ಅವನೊಡನೆ ಹೋರಾಡುವುದು ಸತ್ಯನಿಷೇಧವಾಗಿದೆ."
[صحيح] [متفق عليه]

ಮುಸಲ್ಮಾನನನ್ನು ನಿಂದಿಸುವುದನ್ನು ಮತ್ತು ಹಳಿಯುವುದನ್ನು ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ನಿಷೇಧಿಸಿದ್ದಾರೆ. ಅದು ಫುಸೂಕ್ ಆಗಿದೆ. ಅಂದರೆ, ಅಲ್ಲಾಹು ಮತ್ತು ಅವನ ಸಂದೇಶವಾಹಕರನ್ನು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅನುಸರಿಸುವುದರಿಂದ ಹೊರಹೋಗುವುದು. ಅದೇ ರೀತಿ, ಒಬ್ಬ ಮುಸಲ್ಮಾನನು ತನ್ನ ಮುಸಲ್ಮಾನ ಸಹೋದರನನ್ನು ಕೊಲೆ ಮಾಡುವುದು ಸತ್ಯನಿಷೇಧದ ಕೃತ್ಯಗಳಲ್ಲಿ ಒಳಪಡುತ್ತದೆ. ಆದರೆ ಅದು ಸಣ್ಣ ಸತ್ಯನಿಷೇಧವಾಗಿದೆ.

http://www.sunnah.global/hadeeth/kn/show/5333